# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 482 |
| ಸದಸ್ಯರು ಹೆಸರು | : | ಡಾ: ತಳವಾರ ಸಾಬಣ್ಣ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.08.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾವೇರಿ ಜಿಲ್ಲೆಯ ಚೌಡಯ್ಯದಾನಪುರದಲ್ಲಿರುವ ಚೌಡಯ್ಯನವರ ಐಕ್ಯಮಂಟಪ ವೀಕ್ಷಣೆಗೆ ತೆರಳಿದ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಪೀಠಾಧ್ಯಕ್ಷ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿಯವರನ್ನು ಆ ಊರಿನ ಕೆಲವು ಪಟ್ಟಭದ್ರ ಹಿತಾಸಕ್ತಿಯವರು ತಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸನ್ 2018 ನೇ ಸಾಲಿನಲ್ಲಿ ಈ ಘಟನೆಯ ಕುರಿತು ಎರಡು ಪ್ರಕರಣಗಳು ದಾಖಲಾಗಿದ್ದು, ಹಾಗೂ ದಿನಾಂಕ: 04.07.2025 ರಲ್ಲಿ ಶ್ರೀ ಹೆಚ್ ಕೆ ಪಾಟೀಲ್, ಮಾನ್ಯ ಸಚಿವರು, ಕರ್ನಾಟಕ ಸರ್ಕಾರ ರವರ ಸಂಗಡ ಶ್ರೀ ಶಾಂತಬೀಷ್ಮ ಸ್ವಾಮೀಜಿಯವರು ಹಾಗೂ ಸ್ಥಳೀಯ ಶಾಸಕರು ಹೋದಾಗ ತಡೆದಿರುವುದು ಗಮನಕ್ಕೆ ಬಂದಿರುತ್ತದೆ. |
| ಆ | ಶಾಂತಬೀಷ್ಮ ಸ್ವಾಮೀಜಿಯವರು ಚೌಡಯ್ಯವರ ಐಕ್ಯಮಂಟಪ ಅಭಿವೃದ್ಧಿಗಾಗಿ ಸ್ಥಳ ವೀಕ್ಷಣೆಗೆ ತೆರಳಿದ್ದಾಗ ಅಲ್ಲಿಯ ಸ್ಥಳೀಯರು ತಡೆದಿದ್ದು ಯಾವ ಕಾರಣಕ್ಕಾಗಿ; | ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠ ನರಸಿಪುರದ ಶ್ರೀ ಶಾಂತಬೀಷ್ಮ ಸ್ವಾಮೀಜಿಯವರು ದಿನಾಂಕ: 14.01.2018 ರಂದು ಸಂಕ್ರಾಂತಿಯ ದಿನದಂದು ಗದ್ದುಗೆಯ ಪೂಜೆಗೆ ಭಕ್ತಾದಿಗಳೊಂದಿಗೆ ತೆರಳಿದ ಸಂದರ್ಭದಲ್ಲಿ, ಶ್ರೀ ಒಡೆಯರ ಸಂಸ್ಥಾನ ಮಠ ಚೌಡಯ್ಯದಾನಪುರ ಸ್ವಾಮೀಜಿಯವರಾದ ಶ್ರೀ ಚಿತ್ರಶೇಖರ ಶಿವಾಚಾರ್ಯ ಸ್ವಾಮೀಜಿಗಳು ಮತ್ತು ಶ್ರೀ ಶಾಂತಬೀಷ್ಮ ಸ್ವಾಮೀಜಿಯವರ ಭಕ್ತಾದಿಗಳ ನಡುವೆ ಎರಡು ಗುಂಪುಗಳಾಗಿ ಬೇರ್ಪಟ್ಟು ತಂಟೆ ತಕರಾರು ಮಾಡಿಕೊಂಡಿರುತ್ತಾರೆ. ನಂತರ ಎರಡು ಸ್ವಾಮೀಜಿಗಳ ಭಕ್ತರು ಸೇರಿ ಸಂಧಾನ ಮಾಡಿಕೊಂಡು ಇಲ್ಲಿಯವರೆಗೆ ಪ್ರತಿ ಹುಣ್ಣಿಮೆಗೆ ಶ್ರೀ ಶಾಂತಭೀಷ್ಮ ಸ್ವಾಮೀಜಿಯವರು ಹೋಗಿ ಐಕ್ಯ ಮಂಟಪಕ್ಕೆ ಪೂಜೆ ಸಲ್ಲಿಸುತ್ತಾ ಬರುತ್ತಿರುತ್ತಾರೆ.<br><br>ದಿನಾಂಕ: 04.07.2025 ರಲ್ಲಿ ಮಾನ್ಯ ಶ್ರೀ ಹೆಚ್.ಕೆ.ಪಾಟೀಲ್ ಸಚಿವರು, ಕರ್ನಾಟಕ ಸರ್ಕಾರ ರವರ ಸಂಗಡ ಶ್ರೀ ಶಾಂತಭೀಷ್ಮ ಸ್ವಾಮೀಜಿಯವರು ಹಾಗೂ ಸ್ಥಳೀಯ ಶಾಸಕರು ಸೇರಿ ಪ್ರವಾಸೋದ್ಯಮ ಇಲಾಖೆಯಿಂದ ಅನುದಾನ ಹಾಕುವ ವಿಚಾರಕ್ಕೆ ಐಕ್ಯಮಂಟಪ ವೀಕ್ಷಣೆಗೆ ತೆರಳಿದಾಗ ಚೌದ್ಯನವುರ ಗ್ರಾಮದಲ್ಲಿ ಶ್ರೀ ಚಿತ್ರಶೇಖರ ಶಿವಚಾರ್ಯ ಸ್ವಾಮೀಜಿ ಬೆಂಬಲಿಗರ ಕೆಲವು ಜನರು ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿಯವರನ್ನು ನೀವು ಪ್ರತೀ ಹುಣ್ಣಿಮೆಗೆ ಪೂಜೆಗಾಗಿ ಐಕ್ಯ |

| | | |
|---|---|---|
| | | ಮಂಟಪಕ್ಕೆ ಬಂದು ಹೋಗಿ ಆದರೆ ಇಲಾಖೆಯವರಿಗೆ ಐಕ್ಯಮಂಟಪದ ಅಭಿವೃದ್ಧಿ ಬಗ್ಗೆ ನಾವು ಹಾಗೂ ಶ್ರೀ ಚಿತ್ರಶೇಖರ ಶಿವಚಾರ್ಯ ಸ್ವಾಮೀಜಿಗಳು ವಿವರಿಸುತ್ತೇವೆ ಎಂದು ತಕರಾರು ಮಾಡಿರುತ್ತಾರೆ. |
| ಇ | ಅತ್ಯಂತ ಹಿಂದುಳಿದ ಕೋಲಿ/ ಕಬ್ಬಲಿಗ/ ಬೆಸ್ತ ಸಮುದಾಯದ ಪುಣ್ಯಕ್ಷೇತ್ರವಾದ ಚೌಡಯ್ಯನವರ ಐಕ್ಯಮಂಟಪ ಅಭಿವೃದ್ಧಿಗಾಗಿ ಸ್ವಾಮೀಜಿಯವರನ್ನು ತಡೆದವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಎರಡು ಮಠಾಧೀಶರ ಮೇಲೆ ಉಭಯ ಪಾರ್ಟಿಗಳು ಠಾಣೆಯಲ್ಲಿ 02 ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ.<br><br>1. ದಿನಾಂಕ: 14.01.2018 ರಂದು ಅಪರಾಧ ಸಂಖ್ಯೆ: 10/2018 ಕಲಂ: 143 147 323 427 109 504 506 ಸಹ ಕಲಂ 149 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.<br><br>2. ದಿನಾಂಕ:: 15.01.2018 ರಂದು ಅಪರಾಧ ಸಂಖ್ಯೆ 11/2018 ಕಲಂ: 143 147 323 504 506 ಸಹ ಕಲಂ 149 ಐಪಿಸಿ ರೀತ್ಯಾ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.<br><br>ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ರಾಣೆಬೇನ್ನೂರು ನ್ಯಾಯಾಲಯದಲ್ಲಿ ಉಭಯೇತರರ ಮೇಲೆ ಆದ ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಇರುತ್ತದೆ. |
| ಈ | ಚೌಡಯ್ಯನವರ ಐಕ್ಯಮಂಟಪ/ ಗದ್ದುಗೆಯ ಅಭಿವೃದ್ಧಿಗೆ ತಡೆಯೊಡ್ಡಿದವರ ಮೇಲೆ ಕ್ರಮ ಕೈಗೊಂಡು ಅತ್ಯಂತ ಹಿಂದುಳಿದ ಸಮುದಾಯದ ಭಕ್ತಿಯ ಪ್ರತೀಕವಾಗಿರುವ ಚೌಡಯ್ಯನವರ ಐಕ್ಯಮಂಟಪದ/ ಗದ್ದುಗೆಯ ಅಭಿವೃದ್ಧಿಗೆ ಸರ್ಕಾರ ಕ್ರಮ ಕೈಗೊಳ್ಳುವುದೇ; | ಅಭಿವೃದ್ಧಿಗೆ ತಡೆಯೊಡ್ಡಿದಲ್ಲಿ ಅಂತಹವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಆದರೆ ಚೌಡಯ್ಯನವರ ಐಕ್ಯಮಂಟಪದ/ ಗದ್ದುಗೆಯ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿಯು ಪೊಲೀಸ್ ಇಲಾಖೆಗೆ ಅನ್ವಯಿಸುವುದಿಲ್ಲ. |
| ಉ | ಶಾಂತಭೀಷ್ಮ ಸ್ವಾಮೀಜಿಯವರು ಐಕ್ಯಮಂಟಪ ಪೂಜೆಗೆ ಹೋದಾಗಲೆಲ್ಲಾ ಊರಿನ ಜನ ಅವರ ಮೇಲೆ ಹಲ್ಲೆಗೆ ಬರುವುದು, ಪೂಜೆಗೆ ತಡೆಯೊಡ್ಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ವಿರುದ್ಧವಾಗಿದ್ದು, ಇದಕ್ಕೆ ಸರ್ಕಾರವು ಸೂಕ್ತ ಭದ್ರತೆ ಒದಗಿಸಲು ಕ್ರಮ ಕೈಗೊಳ್ಳುವುದೇ? | ಶಾಂತಭೀಷ್ಮ ಸ್ವಾಮೀಜಿಯವರು ಐಕ್ಯಮಂಟಪ ಪೂಜೆಗೆ ಹೋದಾಗಲೆಲ್ಲಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರನ್ನು ನೇಮಕ ಮಾಡಿಕೊಂಡು ಸೂಕ್ತ ಬಂದೋಬಸ್ತ್ ಮಾಡುತ್ತಾ ಬಂದಿರುತ್ತದೆ. ಅಲ್ಲದೆ ಮೇಲೆ ನಮೂದಿಸಿದಂತೆ ಅಂತಹ ಘಟನೆಗಳು ಚೌಡಯ್ಯದಾನಪುರದಲ್ಲಿ ಈವರೆಗೂ ಜರುಗಿರುವುದಿಲ್ಲ. ಅವಶ್ಯಕತೆ ಕಂಡುಬಂದಲ್ಲಿ ಸ್ವಾಮಿಜಿಯವರಿಗೆ ಸೂಕ್ತ ಭದ್ರತೆ ಒದಗಿಸಲಾಗುವುದು. |

ಹೆಚ್‌ಡಿ 419 ಎಸ್‌ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.